

ಅಂಗಡಿಯಾತ: ಏನು ಬೇಕು?

ಗುಂಡ: ನನ್ನ ಗರ್ಲ್ ಫ್ರೆಂಡ್‌ನ ನಾಯಿಗೆ ಬಿಸ್ಕಿಟ್ ಬೇಕು.

ಅಂಗಡಿಯಾತ: ಇಲ್ಲೇ ತಿನ್ನಿಕ್ಕೋ? ಅಥವಾ ಪಾರ್ಸೆಲ್ ಮಾಡ್ಲಾ...?

★★★

ನಗುವೇ ಒಂದು ದಿವ್ಯ ಔಷಧ...

ಆದರೆ ವಿನಾ ಕಾರಣ ನೀವು ನಕ್ಕರೆ, ನಿಮಗೆ ಬೇರೆ ಔಷಧದ ಅವಶ್ಯಕತೆ ಬೀಳುತ್ತದೆ...!

★★★

ಸಂತಾ ತಲೆಯ ಜೊತೆಗೆ ಭುಜಗಳಿಗೂ ಶಾಂಪೂ ಹಚ್ಚುತ್ತಿದ್ದ...

ಪತ್ನಿ: ಭುಜಗಳಿಗೇಕೆ ಶ್ಯಾಂಪೂ ಹಚ್ಚುತ್ತಿರುವಿರಿ?

ಸಂತಾ: ಇದರ ಮೇಲೆ 'ಹೆಡ್ ಅಂಡ್ ಶೋಲ್ಡರ್' ಅಂತ ಬರೆದಿದೆ ಕಣೇ!

★★★

ಪತಿ: ನನಗೇನಾದರೂ ಲಾಟರಿ ಹೊಡೆದರೆ ನೀನೇನು ಮಾಡ್ತೀಯಾ...?

ಪತ್ನಿ: ಅರ್ಧ ಹಣ ತೆಗೆದುಕೊಂಡು ಶಾಶ್ವತವಾಗಿ ತವರುಮನೆಗೆ ಹೋಗುತ್ತೇನೆ... ನಿಮಗೂ ಖುಷಿ, ನನಗೂ ಖುಷಿ.

ಪತಿ: ಸರಿ, 20 ರೂಪಾಯಿಯ ಲಾಟರಿ ಹೊಡೆದಿದೆ. ತಗೋ ಈ 10 ರೂಪಾಯಿ... ತಕ್ಷಣ ಹೊರಡು...!

★★★

ಮುಂಜಾನೆ ಪತ್ನಿ ತನ್ನ ಪತಿಯಲ್ಲಿ ವಾರ್ತಾ ಪತ್ರಿಕೆ ಕೇಳಿದಳು...

ಪತಿ: ಎಷ್ಟು ಬಾರಿ ತಿಳಿಸಲಿ ನಿನಗೆ, ವಿಜ್ಞಾನ ಅದೆಷ್ಟು ಮುಂದುವರಿದಿದೆ...? ನೀವಿನ್ನೂ ವಾರ್ತಾ ಪತ್ರಿಕೆಯಲ್ಲಿಯೇ ಇದ್ದೀಯಾ... ತಗೋ ನನ್ನ ಈ ಐ–ಫೋನ್...!

ಪತ್ನಿ ಅದನ್ನು ತೆಗೆದುಕೊಂಡು 'ಡಮಾರ್' ಎಂದು ಅಷ್ಟೊತ್ತಿನಿಂದ ಕಾಡುತ್ತಿದ್ದ ಆ ಸಣ್ಣ ಜಿರಲೆಯ ಮೇಲೆ ಹೊಡೆದೇಬಿಟ್ಟಳು...!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

ಒಂದು ಹಳ್ಳಿಯ ಮಹಿಳೆಗೆ ನಗರದಲ್ಲಿ ನೌಕರಿ ಸಿಕ್ಕಿತು. ಅವಳು ಒಂಟಿಯಾಗಿಯೇ ನೌಕರಿಗೆ ಹಾಜರಾಗಲು ನಗರಕ್ಕೆ ಹೋದಳು. ಕೆಲಸಕ್ಕೆ ದಾಖಲಾದ ಮೇಲೆ ಕಂಪೆನಿ ಅವಳಿಗೆ ವಾಸಿಸಲು ಒಂದು ಫ್ಲ್ಯಾಟನ್ನೂ ಕೊಟ್ಟಿತು. ತನ್ನ ಗಂಡನಿಗೆ ಅವಳು 'ನಾನು ಸುರಕ್ಷಿತವಾಗಿ ನಗರ ತಲುಪಿದೆ. ನೀವು ನನ್ನ ಬಗ್ಗೆ ಚಿಂತಿಸಬೇಡಿ' ಎಂದು ತಿಳಿಸಲೋಸುಗ ಎಸ್‌ಎಮ್‌ಎಸ್ ಮಾಡಿದಳು. ಆದರೆ ಅವಳ ಆ ಎಸ್‌ಎಮ್‌ಎಸ್ ಕಣ್‌ತಪ್ಪಿನಿಂದಾಗಿ ಇನ್ನೊಂದು ನಂಬರ್‌ಗೆ ಹೋದದ್ದು ಅವಳಿಗೆ ತಿಳಿಯಲೇ ಇಲ್ಲ. ಯಾವ ವ್ಯಕ್ತಿಗೆ ಈ ಎಸ್‌ಎಮ್‌ಎಸ್ ತಲುಪಿತೋ ಅವನ ಹೆಂಡತಿ ಸತ್ತುಹೋಗಿದ್ದು, ಅವನು ಅದೀಗ ತಾನೇ ಹೆಂಡತಿಯ ಅಂತಿಮ ಸಂಸ್ಕಾರವನ್ನು ಮಾಡಿ ಹತ್ತಾರು ಜನರೊಂದಿಗೆ ಮರಳಿ ಮನೆಗೆ ಬಂದಿದ್ದ. ಆ ಎಸ್‌ಎಮ್‌ಎಸ್ ಓದಿದೊಡನೆಯೇ ಅವನು ಪ್ರಜ್ಞೆತಪ್ಪಿ ಬಿದ್ದ. ಕಡೆಗೆ ಅವನನ್ನು ಆಸ್ಪತ್ರೆಗೆ ದಾಖಲಿಸಬೇಕಾಯಿತು.

ಆ ಎಸ್‌ಎಮ್‌ಎಸ್‌ನಲ್ಲಿ ಏನು ಬರೆಯಲಾಗಿತ್ತೆಂಬುದನ್ನು ಓದಿ–

'ಡಿಯರ್, ನಾನು ಸುರಕ್ಷತವಾಗಿ ತಲುಪಿದ್ದೇನೆ. ಇಲ್ಲಿರಲು ಒಳ್ಳೆಯ ಜಾಗವೂ ಸಿಕ್ಕಿದೆ. ನೀವು ಖಂಡಿತ ಚಿಂತೆ ಮಾಡಬೇಡಿ. ನಾನು ಇನ್ನೊಂದೆರಡು ದಿನಗಳಲ್ಲಿ ಊರಿಗೆ ಬಂದು ನಿಮ್ಮನ್ನೂ ಕರೆದುಕೊಂಡು ಇಲ್ಲಿಗೆ ಬರುತ್ತೇನೆ!'

★★★



ಸಂತ ಜನರನ್ನು ಸಂಬೋಧಿಸಿ ಭಾಷಣದ ಮಧ್ಯದಲ್ಲಿ ಹೇಳಿದರು, 'ಮುಂದಿನ ಭಾನುವಾರ ನಾನು ಸುಳ್ಳು ಹೇಳುವವರ ಬಗ್ಗೆ ಭಾಷಣ ಮಾಡುವೆ. ನನ್ನ ಭಾಷಣವನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಲು ನೀವು ನಾನು ಬರೆದ 'ಸತ್ಯ ಮತ್ತು ಸುಳ್ಳು' ಪುಸ್ತಕದ ಇಪ್ಪತ್ತನೆಯ ಅಧ್ಯಾಯವನ್ನು ಓದಿಕೊಂಡು ಬನ್ನಿ' ಎಂದು ಸಲಹೆಯಿತ್ತರು.

ಆ ರವಿವಾರ ಬಂತು. ಸಂತರು ತಮ್ಮ ಭಾಷಣಕ್ಕೂ ಮೊದಲು ಜನರನ್ನು ಪ್ರಶ್ನಿಸಿದರು, 'ನಿಮ್ಮಲ್ಲಿ ಎಷ್ಟು ಜನ ನನ್ನ ಪುಸ್ತಕದ ಇಪ್ಪತ್ತನೇ ಅಧ್ಯಾಯವನ್ನು ಓದಿಕೊಂಡು ಬಂದಿದ್ದೀರಿ? ಅಂಥವರು ಕೈ ಎತ್ತಿ' ಎಂದೂ ಹೇಳಿದರು.

ಎಲ್ಲರೂ ಕೈ ಎತ್ತಿದರು. ಸಂತರು ಹೇಳಿದರು, 'ನನ್ನ ಭಾಷಣ ನಿಮ್ಮಂತವರಿಗಾಗಿಯೇ ಇದೆ. ಯಾಕೆಂದರೆ ನನ್ನ ಪುಸ್ತಕದಲ್ಲಿ ಇಪ್ಪತ್ತನೆಯ ಅಧ್ಯಾಯವೇ ಇಲ್ಲ!'

★★★

ಮೊದಲ ಕೈದಿ: ಮುಖಗಳು ತುಂಬಾ ಕೈಕೊಡುತ್ತವೆ. ಒಮ್ಮೆ ಒಬ್ಬರು ಜೈಲ್ ಅಧಿಕಾರಿಗಳು ನನ್ನನ್ನು ದಿಲೀಪ್ ಕುಮಾರ್ ಎಂದು ತಿಳಿದರು.

ಎರಡನೆಯ ಕೈದಿ: ನಿಜ ಹೇಳ್ತಿದ್ದೀಯ, ನನಗೂ ಒಮ್ಮೆ ಹೀಗಾಯ್ತು. ಒಬ್ಬರು ಜೈಲ್ ಅಧಿಕಾರಿಗಳು ನನ್ನನ್ನು ರಾಣಾ ಪ್ರತಾಪ ಸಿಂಹನೆಂದು ತಿಳಿದರು.

ಮೂರನೆಯ ಕೈದಿ: ನೋಡಿ, ನಿಮ್ಮಿಬ್ಬರದು ಏನೇನೂ ಅಲ್ಲ. ನಾನು ನಾಲ್ಕನೆಯ ಬಾರಿ ಜೈಲಿಗೆ ಬಂದಾಗ ಜೈಲ್ ಅಧಿಕಾರಿಯೊಬ್ಬರು 'ಹೇ ದೇವ! ನೀನು ಮತ್ತೆ ಬಂದೆಯಾ!' ಎಂದರು.

★★★

ಅಪ್ಪ ತನ್ನ ಮಗನನ್ನು ಮಲಗಿಸಲು ಪ್ರಯತ್ನಿಸುತ್ತಿದ್ದ. ಮಗ ಕಣ್ಣುಗಳನ್ನು ಮುಚ್ಚಿಕೊಂಡು, 'ಅಪ್ಪಾ, ನನಗೆ ನಿದ್ರೆ ಬರುತ್ತಿಲ್ಲ' ಎನ್ನುತ್ತಿದ್ದ.

ಕಡೆಗೆ ಅಪ್ಪ ಮಗನಿಗೆ ತಿಳಿವಳಿಕೆ ಹೇಳಿದ, 'ನೀನು ಕಣ್ಣುಗಳನ್ನು ಮುಚ್ಚಿಕೊಂಡು, ಒಂದು ದೊಡ್ಡ ಬಯಲಿನಲ್ಲಿ ನೂರಾರು ಕುರಿಗಳಿವೆ ಎಂದು ಯೋಚಿಸು. ನಂತರ ಅವುಗಳನ್ನು ಎಣಿಸಲು ಪ್ರಾರಂಭಿಸು. ಎಣಿಕೆ ಮಾಡ್ತಾ–ಮಾಡ್ತಾ ನಿನಗೆ ನಿದ್ರೆ ಬರುತ್ತೆ.'

ಮಗ ಕಣ್ಣುಗಳನ್ನು ಮುಚ್ಚಿಕೊಂಡು ಮೂರು ನಿಮಿಷದ ನಂತರ ಕಣ್ಣುಗಳನ್ನು ತೆರೆದ.

'ಏನಾಯ್ತಪ್ಪಾ? ನೀನು ಕುರಿಗಳನ್ನು ಎಣಿಸಲಿಲ್ವಾ?' ಅಪ್ಪ ಕೇಳಿದ.

'ನಾನು ಕಣ್ಣುಗಳನ್ನು ಮುಚ್ಚಿಕೊಂಡೆ, ಆಗ ನನಗೆ ಬಯಲಿನಲ್ಲಿ ಬರೀ ಕುರಿಗಳೇ ಕಂಡವು. ನಾನು ಎಣಿಸಬೇಕೆಂದಿರುವಾಗ ಇಬ್ಬರು ಕುರಿ ಕಾಯುವವರು ಕಾಣಿಸಿದರು. ನಾನು ಎಣಿಸುವುದಕ್ಕೆ ಬದಲು ಅವರನ್ನೇ ಕುರಿಗಳು ಎಷ್ಟಿವೆ ಎಂದು ಕೇಳಿದೆ. ಅವರು ಒಟ್ಟು ನಾನೂರು ಕುರಿಗಳಿವೆ ಎಂದರು' ಎಂದ ಮಗ.